ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 22-29
©*IIMRD*, Mysuru

IIMRD JOURNALS

www.iimrd.com

# ರೂಪಾಂತರ ನಾಟಕ : ತ್ಯಾಗದ ಅಂತರಾಳದಲ್ಲಿ ಯಶೋಧರಾಳ ಮನೋಸಂಘರ್ಷ

**ಅನಿಲ್ ಕುಮಾರ್ ಎಸ್[1] ಮತ್ತು ಡಾ.ಡಿ.ವಿಜಯಲಕ್ಷ್ಮಿ[2]**

[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು

ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಪ್ರಾಚೀನ ಭಾರತದ ಇತಿಹಾಸದಲ್ಲಿ ಕ್ರಿ.ಪೂ ಆರನೆಯ ಶತಮಾನವು ಒಂದು ಪ್ರಮುಖ ಕಾಲಘಟ್ಟ. ಏಕೆಂದರೆ ಈ ಅವಧಿಯಲ್ಲಿ ಪುರೋಹಿತ ವರ್ಗದವರಿಂದಾಗಿ ವೈದಿಕ ಮತವು ತುಂಬಾ ಯಜ್ಞಯಾಗಾದಿ ಕರ್ಮಗಳಿಂದ ಕೂಡಿದ್ದಾಗಿತ್ತು. ನೀತಿ ಸಂಹಿತೆ ಕೂಡ ಜಾತಿ ಪದ್ಧತಿಯಿಂದಲೇ ನಿರ್ಧರಿಸಲ್ಪಡುತ್ತಿತ್ತು. ಉಪನಿಷತ್ತು ಬೋಧಿಸಿದ ವಿಶ್ವಮತಕ್ಕೆ ಅಲ್ಲಿ ಯಾವುದೇ ಪ್ರಭಾವವಿರಲಿಲ್ಲ. ಜನಸಾಮಾನ್ಯನು ಮೂಢನಂಬಿಕೆಗಳಿಂದ ತುಂಬಿದ ಜೀವನವನ್ನೇ ನಡೆಸುತ್ತಾ ತನ್ನ ವಂಶಾನುಗತ ಸೇವೆಗಳ ಆರಾಧಕನಾಗಿದ್ದನು. ಅರ್ಥಹೀನ ಕರ್ಮಗಳಿಂದಾಗಿ ನಿಜವಾದ ಮತ, ನೀತಿಗಳು ಅದೃಶ್ಯವಾದವು. ಬಾಲಿಶ ಮೂಢನಂಬಿಕೆಗಳಿಂದ ಮತ್ತು ನಿಷ್ಫಲ ವಾದಗಳಿಂದ ಹೀಗಾಗಲು ಎಡೆ ಉಂಟಾಯಿತು. ಮೂಕ ಪ್ರಾಣಿಗಳ ವಧೆಯಿಂದಲೂ ಯಜ್ಞಯಾಗಾದಿಗಳಿಂದಲೂ ಮತ್ತು ತಾವು ಇತರರಿಗಿಂತ ಮೇಲೆಂಬ ಕಲ್ಪನೆಯನ್ನು ಮೂಡಿಸಿದ್ದ ಬ್ರಾಹ್ಮಣ ಪುರೋಹಿತ ವರ್ಗದವರ ಪ್ರಾಬಲ್ಯದಿಂದಲೂ ಸಮಾಜದಲ್ಲಿ ಧಾರ್ಮಿಕ ಅಶಾಂತಿ ತಲೆದೋರಿತು. ಆರ್ಯರ ಧರ್ಮದ ಚೌಕಟ್ಟಿನಿಂದ ಹೊರಗಿಡಲ್ಪಟ್ಟು ಧಾರ್ಮಿಕ ನಿರಾಶೆಯನ್ನು ಹೊಂದಿದ್ದ ಶೂದ್ರರ ಉದ್ಧಾರಕ್ಕಾಗಿ ಮಾರ್ಗದರ್ಶನವು ಅತ್ಯಾವಶ್ಯಕವಾಗಿತ್ತು. ಇದಲ್ಲದೆ ವೇದ ಉಪನಿಷತ್ತುಗಳು ಸಂಸ್ಕೃತ ಭಾಷೆಯಲ್ಲಿದ್ದು ಜನಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಉದಯಿಸಿದವನೇ ಬುದ್ಧ. ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತು ಹಲವಾರು ಕೃತಿಗಳು ಹೊರಬಂದಿವೆ. ಪ್ರಸ್ತುತ ಲೇಖನದಲ್ಲಿ ಜಯಪ್ರಕಾಶ ಮಾವಿನಕುಳಿ ಅವರ 'ರೂಪಾಂತರ' (1997) ನಾಟಕ ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ನಾಟಕ ಸಾಹಿತ್ಯ, ರೂಪಾಂತರ, ಯಶೋಧರಾ, ಮನೋಸಂಘರ್ಷ.*

## ಪೀಠಿಕೆ

ರಾಜಕುಮಾರ ಸಿದ್ಧಾರ್ಥ ರಾಜವೈಭವದ ಸಕಲವನ್ನು ತೊರೆದು ಬದುಕನ್ನೇ ಗೆದ್ದು ಬುದ್ಧನಾದುದು ಮಾನವ ಕುಲದ ಬದುಕಿಗೆ ಹಿಡಿದ ಕನ್ನಡಿಯಾಗಿದೆ. ಭಗವಾನ್ ಬುದ್ಧ ಜಾತಿ, ಮತ, ಪಂಥ ಪಂಗಡಗಳನ್ನು ಮೀರಿ ನಿಂತು ಮಾನವೀಯತೆಯ ಮಹೋನ್ನತ ಪದವಿಗೇರಿದ ಮಹಾನ್

*Please cite this article as:* ಅನಿಲ್ ಕುಮಾರ್ ಎಸ್ ಮತ್ತು ಡಿ.ವಿಜಯಲಕ್ಷ್ಮಿ. (2025). ರೂಪಾಂತರ ನಾಟಕ : ತ್ಯಾಗದ ಅಂತರಾಳದಲ್ಲಿ ಯಶೋಧರಾಳ ಮನೋಸಂಘರ್ಷ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ. 22–29*

ಮಾನವತಾವಾದಿಯಾಗಿದ್ದಾರೆ. ಬೋಧಿಯ ಬೆಳಕನ್ನು ಆತ್ಮೀಕರಿಸಿಕೊಂಡ ಬುದ್ಧನು ಸಾರಿದ ಸಂದೇಶಗಳು ಸಾರ್ವಕಾಲಿಕ ಸತ್ಯಗಳಾಗಿವೆ. "ಆಸೆಯೇ ದುಃಖಕ್ಕೆ ಮೂಲ" ಕಾರಣವೆಂದು ಜನರಿಗೆ ತಿಳಿಸಿದ ಮನುಕುಲದ ಯಶಸ್ಸಿಗೆ ಮಾನವ ದುರಾಸೆಯನ್ನು ತೊರೆಯುವುದೇ ಆಗಿದೆ ಎಂದು ಸಾರಿದ ಮಹಾನ್ ಚೇತನ ಬುದ್ಧ.

ವರ್ತಮಾನದಲ್ಲಿ ಮೂಢನಂಬಿಕೆ, ಅಸಮಾನತೆಯು ಹೆಚ್ಚಿದ್ದು ಈ ಸಮಾಜವನ್ನು ಹಸನು ಮಾಡಲು ಈ ಭೂಮಿಯಲ್ಲಿ ಹಲವು ಮಹಾನ್ ಪುರುಷರು ಅವತರಿಸಿದ್ದಾರೆ. ಕಾಲ, ದೇಶ, ಪರಿಸ್ಥಿತಿ, ಪರಿಸರಗಳಿಗೆ ಅನುಗುಣವಾಗಿ ನೀತಿ ಧರ್ಮಗಳನ್ನು ಬೋಧಿಸಿದ್ದಾರೆ. ಅವರು ಬೋಧಿಸಿದ ಹಲವಾರು ಉಪದೇಶಗಳು, ಅನುಭವಗಳು ವಿವಿಧ ದೃಷ್ಟಿಕೋನಗಳಿಂದ ಸಾರ್ವಕಾಲಿಕ ಸತ್ಯಗಳಾಗಿ ಉಳಿದಿವೆ. ಇಂತಹ ಮಹಾಪುರುಷರುಗಳಲ್ಲಿ ಗೌತಮಬುದ್ಧನು ಪ್ರಮುಖನಾಗಿದ್ದಾನೆ.

ಆಧ್ಯಾತ್ಮಿಕತೆಯಲ್ಲಿ ಪುರುಷ ಮತ್ತು ಸ್ತ್ರೀ ಇಬ್ಬರಿಗೂ ಸಮಾನ ಹಕ್ಕು ಇದೆ ಎಂದು ಬಲವಾಗಿ ಪ್ರತಿಪಾದಿಸಿದ ವೇದಕಾಲದ ಪ್ರಾಬಲ್ಯದಲ್ಲಿ ಬುದ್ಧ, ನಿರ್ವಾಣ ಇಲ್ಲವೆ ಮೋಕ್ಷದ ಬಾಗಿಲು ಪ್ರತಿಯೋರ್ವ ಸ್ತ್ರೀ ಪುರುಷರಿಗೂ ತೆರೆದು ಜಾತಿಯಲ್ಲಿ ಅಂತ್ಯಜನೆನಿಸಿಕೊಂಡವರೂ ಸಹ ಉನ್ನತ ಹಂತ ಗಳಿಸಬಲ್ಲನೆಂದು ಸಾಧಿಸಿ ತೋರಿಸಿಕೊಟ್ಟನು. ಮಾನವರ ಮೌಲ್ಯವನ್ನು ಜಾತಿ–ಧರ್ಮಗಳಿಂದ ನಿರ್ಧಾರ ಮಾಡಲು ಸಾಧ್ಯವಿಲ್ಲ ಅದರ ಬದಲಾಗಿ ಮಾನವೀಯತೆ, ಕರುಣೆ, ಅಹಿಂಸೆ, ಸಮಾನತೆಯನ್ನು ತಮ್ಮ ಬೋಧನೆಗಳ ಮೂಲಕ ಬುದ್ಧನು ಸಾರಿದನು. ಅವರ ಬೋಧನೆಗಳು ಈಗಲೂ ಸನಾತನ ಹಿಂದೂ ಧರ್ಮಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿವೆ.

ಕ್ರಿ.ಪೂ 6ನೇ ಶತಮಾನದಲ್ಲಿದ್ದ ಗೌತಮ ಬುದ್ಧನ ಜೀವನ ಮತ್ತು ಅವನ ಸಂದೇಶಗಳು ಮಾನವ ಕುಲಕ್ಕೆ ಸತ್ಯ, ಅಹಿಂಸೆ, ಕರುಣೆ, ದಯೆ ಮತ್ತು ಭ್ರಾತೃತ್ವದ ಸಂದೇಶವನ್ನು ಬುದ್ಧ ಸಾರಿದನು ಅವುಗಳು ಇಂದಿಗೂ ಆಧುನಿಕ ಪ್ರಪಂಚಕ್ಕೆ ಅವಶ್ಯಕವಾಗಿವೆ. ಜಗತ್ತಿನ ಇತಿಹಾಸದಲ್ಲಿ ಜ್ಞಾನಜ್ಯೋತಿಯಾಗಿ ಬೆಳಗಿದ 'ಏಷ್ಯಾದ ಬೆಳಕು' ಎಂದೇ ಪ್ರಖ್ಯಾತನಾದ ಬುದ್ಧ ಮತ್ತು ಅವನ ಧಮ್ಮದ ಪ್ರಭಾವ ಹಾಗೂ ಪ್ರೇರಣೆಗಳು ಇಡೀ ಜಗತ್ತಿಗೆ ಪ್ರೇರಣೆಯಾದಂತೆ ಕನ್ನಡ ಸಾಹಿತ್ಯಕ್ಕೂ ಪ್ರೇರಣೆಯನ್ನು ಒದಗಿಸಿದೆ. ಟಿ.ಎಸ್.ವೆಂಕಣ್ಣಯ್ಯನವರು 'ಕನ್ನಡ ಸಾಹಿತ್ಯಕ್ಕೆ ಬೌದ್ಧರೇ ಆದಿಕವಿಗಳು'[1] ಎಂದು ಹೇಳಿದ್ದಾರೆ. ಈ ಮಾತನ್ನು ಗಮನಿಸಿದರೆ ಕನ್ನಡದಲ್ಲಿ ಬೌದ್ಧ ಸಾಹಿತ್ಯದ ಬೇರು ಎಷ್ಟು ಆಳವಾಗಿ ನೆಲೆಯೂರಿದೆ ಎನ್ನುವುದು ಅರಿವಿಗೆ ಬರುತ್ತದೆ.

ಬುದ್ಧನನ್ನು ಕುರಿತು ಕನ್ನಡದಲ್ಲಿ ಬರೆದು ಆಧ್ಯರು ಆದವರು ಅಶ್ವತ್ಥನಾರಾಯಣ ಶಾಸ್ತ್ರೀ[2] ಅವರ 'ಬೌದ್ಧವತಾರ'(1907) ಮತ್ತು 'ಧರ್ಮವೆಂಬ ಬುದ್ಧಗೀತೆ'(1908) 'ವ್ಯಾಘ್ರೀಜಾತಕ' ಮತ್ತು 'ಧರ್ಮಸಾಮ್ರಾಜ್ಯ' ಬೌದ್ಧವಿಷಯಕವಾದ ಗ್ರಂಥಗಳಾಗಿವೆ. ಪಾಲಿಯಿಂದ ಕನ್ನಡಕ್ಕೆ ಬಂದ ಮೊದಲ ಗ್ರಂಥ

---

[1] ರಂ. ಶ್ರೀ. ಮುಗುಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ–39

[2] ಜಿ.ಪಿ.ರಾಜರತ್ನಂ, (ಅನು)–(ಸಂ) ವೈಶಾಖ ಶುಕ್ಲ ಪೂರ್ಣಿಮೆ ಅಥವಾ ಬುದ್ಧನಿಗೆ ಕನ್ನಡದ ಕಾಣಿಕೆ, ಭಿನ್ನಹ, ಪುಟ–3–4

'ಧರ್ಮಪದ' ಬಿದರೆಯವರದು[3]. ಜಿ.ಪಿ.ರಾಜರತ್ನಂ ಅವರ 'ಜಾತಕ ಕಥೆಗಳು' (1941), 'ಧರ್ಮದಾನಿ ಬುದ್ಧ', 'ಬುದ್ಧಚರಿತೆ', ಎಂ.ಆರ್.ಶ್ರೀನಿವಾಸಮೂರ್ತಿಯವರ 'ಗೌತಮಬುದ್ಧ', ಸಿ.ವೆಂಕಟರಾಮಯ್ಯನವರ 'ಬುದ್ಧ'(ಜೀವನ ಚರಿತ್ರೆ) ಹೀಗೆ ಬುದ್ಧನ ಜೀವನ ಮತ್ತು ಸಂದೇಶಗಳ ವಿಷಯವಾಗಿ ಹಲವರು ಹಲವು ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಬುದ್ಧನ ಜೀವನವನ್ನು ಆಧರಿಸಿದ ನಾಟಕಗಳಲ್ಲಿ ಕುವೆಂಪು ಅವರ 'ಮಹಾರಾತ್ರಿ'(1931) ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ 'ಯಶೋಧರಾ'(1933) ನಾಟಕಗಳು ಪ್ರಮುಖವಾಗಿದ್ದು ಸರಳ ರಗಳೆಯ ಛಂದಸ್ಸಿನಲ್ಲಿ ರಚಿತವಾಗಿವೆ. ಹಾಗೆಯೇ ಶಿವರಾಮ ಕಾರಂತರ 'ಬೌದ್ಧಯಾತ್ರಾ'(1933) ನಾಟಕವು ಗೀತಾನಾಟಕದಲ್ಲಿ ರಚಿತವಾಗಿದೆ. 'ಯಶೋಧರಾ' ನಾಟಕವು ಬುದ್ಧನ ಕಥೆಯನ್ನು ಯಶೋಧರೆಯ ಪಾತ್ರ ಮತ್ತು ತ್ಯಾಗದ ದೃಷ್ಟಿಕೋನದಿಂದ ಕಥೆಯನ್ನು ಹೇಳುತ್ತದೆ. ಕನ್ನಡ ಸಾಹಿತಿಗಳು ತಮ್ಮ ಕಾವ್ಯ, ನಾಟಕ, ಕಥೆ, ಕಾದಂಬರಿಗಳಲ್ಲಿ ಬುದ್ಧನ ಜೀವನ ಮತ್ತು ಸಂದೇಶಗಳನ್ನು ಬಳಸಿಕೊಂಡು ಸಾಹಿತ್ಯವನ್ನು ರಚಿಸಿದ್ದಾರೆ. ಹೀಗೆ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಘಟ್ಟಗಳಲ್ಲಿ ಬುದ್ಧನ ಜೀವನ ಮತ್ತು ವಿಚಾರಗಳು ಸಾಹಿತ್ಯದಲ್ಲಿ ಹೆಚ್ಚಿನ ಗಮನವನ್ನು ಸೆಳೆದಿವೆ. ಅಂತಹವರ ಕೃತಿಗಳಲ್ಲಿ ಜಯಪ್ರಕಾಶ ಮಾವಿನಕುಳಿ ಅವರ 'ರೂಪಾಂತರ'(1997) ನಾಟಕವು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಪ್ರಸ್ತುತ 'ರೂಪಾಂತರ' ನಾಟಕದ ವಸ್ತು ಬುದ್ಧನ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ನಾಟಕಕಾರರು ಬಹು ಸೂಚ್ಯವಾಗಿ ಕೆಲವೇ ಕೆಲವು ಘಟನೆಗಳ ಮುಖಾಂತರ ಬುದ್ಧನ ಜೀವನವನ್ನು ನಾಟಕಕಾರರು ಸೆರೆಹಿಡಿಯುತ್ತಾರೆ. ಇಲ್ಲಿ ನಾಟಕಕಾರರು ಚಿತ್ರಿಸುವ ಸನ್ನಿವೇಶಗಳೆಂದರೆ –

ಸಿದ್ಧಾರ್ಥನಿಗೂ ದೇವದತ್ತನಿಗೂ ನಡೆಯುವ ಒಂದು ಸಂವಾದ. ಒಂದು ಹಂಸಕ್ಕೆ ದೇವದತ್ತ ಬಾಣ ಬಿಟ್ಟಿರುತ್ತಾನೆ. ಅದು ಸಾಯುವುದರಲ್ಲಿರುತ್ತದೆ. ಆಗ ಸಿದ್ಧಾರ್ಥನು ಹೋಗಿ ಆ ಬಾಣವನ್ನು ಕಿತ್ತು, ಆ ಹಂಸವನ್ನು ಉಳಿಸುತ್ತಾನೆ. ಈಗ ಇಲ್ಲಿ ಹುಟ್ಟುವ ಪ್ರಶ್ನೆ ಎಂದರೆ ಈ ಹಂಸ ಯಾರಿಗೆ ಸೇರಿದ್ದು ಎನ್ನುವುದಾಗಿದೆ. ಇದಕ್ಕೆ ಪ್ರಾಣವನ್ನು ಕೊಟ್ಟ ಸಿದ್ಧಾರ್ಥನಿಗೆ ಸೇರಿತ್ತೋ ಇಲ್ಲ ಬೇಟೆಯಲ್ಲಿ ಅದನ್ನು ಕೆಳಗೆ ಬೀಳಿಸಿದ ದೇವದತ್ತನಿಗೆ ಸೇರಿದ್ದೋ ಎನ್ನುವುದಾಗಿದೆ. ಈ ತಾತ್ವಿಕ ಪ್ರಶ್ನೆಯೊಂದಿಗೆ ಆರಂಭವಾಗುವ ನಾಟಕವು ಯಶೋಧರೆಯ ಬದುಕಿನ ಪ್ರಶ್ನೆಯೊಂದಿಗೆ ಕೊನೆಯಾಗುತ್ತದೆ.

ಆಮ್ರಪಾಲಿ ಅಂದಿನ ಕಾಲದಲ್ಲಿ ವೇಶ್ಯೆಯಾಗಿದ್ದಳು ಇವಳು ಬುದ್ಧನಿಗೆ ಶರಣು ಹೋದಾಗ, ಜನರು ಈ ಕುರಿತು ಗಾಳಿಮಾತುಗಳನ್ನು ಸೃಷ್ಟಿಸುತ್ತಾರೆ. ಅಂದರೆ ಇಂದು ಹೇಗೆ ಹೆಣ್ಣು–ಗಂಡಿನ ನಡುವಿನ ಗಾಸಿಪ್‌ಗಳು ಹುಟ್ಟಿಕೊಳ್ಳುತ್ತದೆಯೋ ಹಾಗೆಯೇ ಬುದ್ಧ ಹಾಗೂ ಆಮ್ರಪಾಲಿಯರ ನಡುವಿನ ಸಂಬಂಧಕ್ಕೂ ಕೆಲವೊಂದು ಟೀಕೆಗಳು ಹುಟ್ಟಿಕೊಳ್ಳುತ್ತವೆ. ಬುದ್ಧನೊಂದಿಗಿನ ಇತರೆ ಭಿಕ್ಷುಗಳು ಆಮ್ರಪಾಲಿಯನ್ನು ಕಾಮದ ದೃಷ್ಟಿಯಿಂದ ನೋಡುತ್ತಿರುವಾಗ ಬುದ್ಧ ಅವಳನ್ನು ತಾಯಿಯಾಗಿ ಕಾಣುತ್ತಾನೆ. ಬುದ್ಧ ಆಮ್ರಪಾಲಿ ನೀಡಿದ ಹಣವನ್ನು

[3] ಜಿ.ಪಿ.ರಾಜರತ್ನಂ, (ಸಂ) ವೈಶಾಖ ಶುಕ್ಲ ಪೂರ್ಣಿಮೆ ಅಥವಾ ಬುದ್ಧನಿಗೆ ಕನ್ನಡದ ಕಾಣಿಕೆ, ಭಿನ್ನಹ, ಪುಟ–5

ತೆಗೆದುಕೊಳ್ಳದೇ ಹೋದಾಗ ಇತರೆ ಭಿಕ್ಷುಗಳು ಆಮ್ರಪಾಲಿ ಶ್ರೀಮಂತಳು, ಅವಳು ನೀಡಿದ ಹಣವನ್ನು ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ಅವರ ವಾದ.

ನಂತರದಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ಘಟನೆಯೆಂದರೆ ಅಂಗುಲಿಮಾಲ ಮಾತ್ರ ಕಿಸಾಗೋತಮಿಯರದ್ದಾಗಿದೆ. ಬುದ್ಧನ ಇತಿಹಾಸದೊಂದಿಗೆ ಬೆಸೆದುಕೊಂಡಿರುವ ಇತರೆ ಮುಖ್ಯ ವ್ಯಕ್ತಿಗಳಲ್ಲಿ ಅಂಗುಲಿಮಾಲನ ಇತಿಹಾಸವೂ ಒಂದು. ಆಚಾರ್ಯ ತಥಾಗತರ ಜೀವನಯಾನದ ಒಂದು ಘಟನೆಯನ್ನು ಅಂಗುಲಿಮಾಲನ ಪರಿವರ್ತನೆ ಮುಖ್ಯವಾಗಿಟ್ಟುಕೊಂಡಿದೆ. ಬುದ್ಧ ಸಂಚಾರ ಪಥದಲ್ಲಿದ್ದ ಅಂಗುಲಿಮಾಲ ಎಂಬ ದರೋಡೆಕೋರನ ಕುರಿತು ಜನರ ಮನಸ್ಸಿನಲ್ಲಿದ್ದ ಭಯ, ಉತ್ಪ್ರೇಕ್ಷೆಗಳು ಆತನನ್ನು ರಾಕ್ಷಸನಂತೆ ಕಾಣುವ ಹಾಗೆ ಮಾಡಿದ್ದವು. ಆದರೆ ಸ್ವತಃ ಪರೀಕ್ಷಿಸದೆ ಯಾವುದನ್ನೂ ನಂಬದ, ಅನುಯಾಯಿಗಳಿಗೂ ಅದನ್ನೇ ಬೋಧಿಸಿದ ಆಚಾರ್ಯ ಬುದ್ಧ ತಮ್ಮ ಜೀವದ ಹಂಗನ್ನು ತೊರೆದು ಅಂಗುಲಿಮಾಲನಿರುವಲ್ಲಿಗೆ ಹೋಗಿ, ಅವನನ್ನು ತಮ್ಮ ಪ್ರೀತಿ, ಕರುಣೆಗಳಿಂದ ಪರಿವರ್ತಿಸಿದನು. ಅಂಗುಲಿಮಾಲನ ವ್ಯಕ್ತಿತ್ವದ ಪರಿಚಯವಿಲ್ಲದ ಜನರು ಅವನು ಮಾಡುತ್ತಿದ್ದ ಕಾರ್ಯಗಳಿಂದಾಗಿ ಅವನನ್ನು ರಾಕ್ಷಸ ಪಟ್ಟಕ್ಕೆ ಏರಿಸಿದ್ದರು. ಆದರೆ ಬುದ್ಧನು ಕರುಣೆಯಿಂದ ಕೂಡಿದವನಾದ್ದರಿಂದ ತನ್ನ ಜೀವದ ಹಂಗನ್ನು ತೊರೆದು ಇರುವಲ್ಲಿಗೆ ಹೋಗಿ ಅವನೊಂದಿಗೆ ಮಾತನಾಡಿ ಅವನ ಮನಸ್ಸಿನಲ್ಲಿದ್ದ ಕಲ್ಮಶಗಳು, ನೋವು, ಹತಾಶೆ, ಸಂಕಟಗಳನ್ನು ಹೊರಗೆಡಹಿದನು, ಅವನಲ್ಲಿನ ದುಃಖವನ್ನು ದೂರವಾಗಿಸಿದನು. ಜೊತೆಗೆ ಅವನನ್ನು ಧರ್ಮದ ಹಾದಿಗೆ ತಂದನು. ಸಾವಿಲ್ಲದ ಮನೆಯ ಸಾಸಿವೆ ಎನ್ನುವ ಪ್ರಸಿದ್ಧಿ ಪಡೆದಿರುವವಳು ಕಿಸಾಗೋತಮಿ. ತನ್ನ ಮಗುವನ್ನು ಕಳೆದುಕೊಂಡು, ಅದನ್ನು ರಕ್ಷಿಸಿಕೊಳ್ಳಲು ಬುದ್ಧನೆಡೆಗೆ ಓಡೋಡಿ ಬರುವ ಅವಳಿಗೆ ಬುದ್ಧ ಸಾವು ಜಗತ್ತಿನಲ್ಲಿ ಸಹಜ, ಸಾವಿಲ್ಲದ ಮನೆಯೂ ಪ್ರಪಂಚದಲ್ಲಿ ಯಾವುದೂ ಇಲ್ಲವೆನ್ನುವುದನ್ನು ತೋರಿಸಿಕೊಡುತ್ತಾನೆ. ನಂತರ ಕಿಸಾಗೋತಮಿ ವಾಸ್ತವವನ್ನು ಅರಿತುಕೊಂಡು ತನ್ನ ಮಗುವಿನ ಅಗಲಿಕೆಯ ನೋವನ್ನು ಸಹಿಸಿಕೊಳ್ಳುತ್ತಾಳೆ.

ಇಲ್ಲಿಂದ ಮುಂದೆ ನಾಟಕದಲ್ಲಿ ಕಾಣಿಸಿಕೊಳ್ಳುವುದು ಸಾಂಸಾರಿಕ ಆಯಾಮವಾಗಿದೆ. ಇಲ್ಲಿ ಬುದ್ಧ ತನ್ನ ಸಂಸಾರವನ್ನು ಬಿಟ್ಟು ಹೋಗಿದ್ದಾನೆ. ಜೀವನ ದುಃಖ, 'ಆಸೆಯೇ ದುಃಖಕ್ಕೆ ಮೂಲ' ಎನ್ನುವ ಸತ್ಯವನ್ನು ಈಗವನು ಅರಿತಿದ್ದಾನೆ. ಆದರೆ ಅವನು ತಾನು ಹುಡುಕಬೇಕಾದ ಸತ್ಯವನ್ನು ಹುಡುಕಲು ಹೊರಟಾಗ ಅವನನ್ನು ನಂಬಿ ಒಬ್ಬಳು ಬಂದಿದ್ದಳು. ಅವನ ರಕ್ತವನ್ನು ಹಂಚಿಕೊಂಡ ಒಬ್ಬ ಮಗನಿದ್ದನು. ಬುದ್ಧನು ಇವರನ್ನು ದುಃಖಕ್ಕೆ ತಳ್ಳಿ ಅದೇ ದುಃಖದ ಮೂಲವನ್ನು ಹುಡುಕಲು ಹೊರಟಿದ್ದನು. ಬುದ್ಧನು ಹೋದ ನಂತರ ಯಶೋಧರೆ ತನ್ನ ಮಗ ರಾಹುಲನನ್ನು ತಂದೆಯಾಗಿ, ತಾಯಿಯಾಗಿ ಸಾಕಿ ಸಲುಹಿದಳು. ಆದರೆ ಒಬ್ಬ ಹೆಂಡತಿಯಾಗಿ ಅವಳೊಳಗಿನ ನೋವು ಯಾರಿಗೂ ಕಾಣಲಿಲ್ಲ. ಸ್ವತಃ ಬುದ್ಧನಿಗೂ ಸಹ. ರಾಹುಲ ಆಟವಾಡುತ್ತಾ ತನ್ನ ತಂದೆಯನ್ನು ಹುಡುಕುವಾಗ, ತನ್ನ ತಂದೆಯ ಬರುವಿಕೆಯನ್ನು ಎದುರು ನೋಡುವಾಗ, ಅಮ್ಮನನ್ನು ತನ್ನ ತಂದೆಯ ಕುರಿತು ವಿಚಾರಿಸಿದಾಗ ಆ ತಾಯಿಯೊಳಗಾಗುತ್ತಿದ್ದ ಯಾತನೆ ಎಂತಹುದು ಎನ್ನುವುದು ಅವಳೊಬ್ಬಳಿಗೆ ಮಾತ್ರ ಗೊತ್ತು. ಆದರೆ ಒಬ್ಬ ಸ್ತ್ರೀವ್ಯಥೆಯನ್ನು ಇತಿಹಾಸವನ್ನಾಗಿಸುವ ಯಾವ ಇತಿಹಾಸಕಾರನೂ ಅಂದು ಇರಲಿಲ್ಲವಾದ್ದರಿಂದ ಯೋಶೋಧರೆಯ ದುಃಖ

ಅವಳ ಮನದೊಳಗೆ ಹುದುಗಿ ಹೋಯಿತು. ಪ್ರಸ್ತುತ ನಾಟಕ ಈ ಯಶೋಧರೆಯ ನೋವನ್ನು ಸ್ತ್ರೀವಾದಿ ನೆಲೆಯ ಹಿನ್ನೆಲೆಯಲ್ಲಿ ಹಿಡಿದಿಡುತ್ತದೆ.

ರಾಹುಲ ತನ್ನ ತಂದೆಯ ಕುರಿತು ಕೇಳಿದಾಗ ಅವರು ಇಡೀ ಜಗತ್ತಿಗೆ ದಾರಿ ತೋರಿಸುತ್ತಾರೆ ಮಗು ಎನ್ನುತ್ತಾಳೆ. ಆಗ ರಾಹುಲ ಕೇಳುವ ಪ್ರಶ್ನೆ, ಈಗ ಜಗತ್ತಿಗೆ ದಾರಿ ಇಲ್ಲವೇನಮ್ಮ? ಎಂದು. ಯಶೋಧರೆ ಅವರು ಜಗತ್ತಿಗೆ ದಾರಿದೀಪ ಆಗುತ್ತಾರೆ ಎಂದಾಗ ರಾಹುಲ 'ಈಗ ದಾರಿಗೆ ದೀಪ ಇಲ್ಲವೇನಮ್ಮ? ಎನ್ನುವ ಪ್ರಶ್ನೆಗಳನ್ನು ಹುಟ್ಟುಹಾಕುತ್ತಾನೆ. ಬುದ್ಧನಿಗಿಂತಲೂ ಮೊದಲು ಜಗತ್ತು ಇತ್ತು. ಬುದ್ದನ ನಂತರವೂ ಜಗತ್ತು ನಿಂತಿದೆ. ಆದರೆ ಬುದ್ಧ ಹೊರಟಿದ್ದು ತನ್ನ ಆಧ್ಯಾತ್ಮಿಕ ದರ್ಶನಕ್ಕಾಗಿ. ಆ ದರ್ಶನದ ಹಾದಿಯಲ್ಲಿ ಅವನೇನೇ ಸತ್ಯವನ್ನು ಕಂಡುಕೊಂಡರೂ ಸಹ ತನ್ನನ್ನು ನಂಬಿದ ಕುಟುಂಬದವರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸೋತನು ಎನ್ನುವುದಷ್ಟೇ ವಾಸ್ತವ ಎನ್ನುವುದನ್ನು ಮರೆಯುವಂತಿಲ್ಲ.

ನೇಪಾಳದ ಕಪಿಲವಸ್ತುವಿನ ರಾಜ ಶುದ್ಧೋದನ ಮತ್ತು ಮಾಯಾದೇವಿಯರ ಮಗನಾಗಿ ಜನಿಸಿದವನು ಬುದ್ಧ. ಇವನ ಹುಟ್ಟಿನ ಜಾತಕದಲ್ಲಿ ಇವನೊಬ್ಬ ಸನ್ಯಾಸಿಯಾಗುತ್ತಾನೆಂದು ಇದ್ದುದರಿಂದ ಇವನ ತಂದೆ ಇವನನ್ನು ಅರಮನೆಯೊಳಗೆ ಬೆಳೆಸುತ್ತಾನೆ. ಅಲ್ಲಿಯೇ ಮದುವೆ, ಮಗು ಎಲ್ಲವೂ ಬುದ್ಧನಿಗಾಗುತ್ತದೆ. ಆದರೆ ವಿಧಿಯಿಂದ ಯಾರೂ ಸಹ ಪಾರಾಗಲೂ ಸಾಧ್ಯವಿಲ್ಲ ಎನ್ನುವಂತೆ ಬುದ್ಧನು ಹೊರಪ್ರಪಂಚಕ್ಕೆ ಬಂದಾಗ ಅವನಿಗೆ ವೈರಾಗ್ಯವನ್ನುಂಟು ಮಾಡುವ ಅನೇಕ ಪ್ರಕರಣಗಳು ಜರುಗುತ್ತವೆ. ನಂತರ ಅವನು ತನ್ನ ಅರಮನೆ ರಾಜ್ಯ, ಹೆಂಡತಿ–ಮಕ್ಕಳನ್ನು ತೊರೆದು ಸತ್ಯದರ್ಶನಕ್ಕೆ ಹೊರಡುತ್ತಾನೆ. ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ನಾಟಕದ ಚೌಕಟ್ಟಿಗೆ ಅನುಗುಣವಾಗುವಂತೆ ನಾಟಕಕಾರರು ಬುದ್ಧನಿಗೆ ಸಂಬಂಧಿಸಿದ ಅನೇಕ ಘಟನೆಗಳನ್ನು ಸಾಲುಸಾಲಾಗಿ ಸೆರೆಹಿಡಿಯುತ್ತಾರೆ. ಆದರೆ ಬುದ್ಧನ ಸಂಪೂರ್ಣ ಅಸ್ತಿತ್ವ ನಾಟಕದೊಳಗೆ ಲಭ್ಯವಾಗುವುದು ಯಶೋಧರೆ ಮತ್ತು ಬುದ್ಧನ ನಡುವಿನ ಸಂವಾದದ ಮೂಲಕವಾಗಿದೆ.

ಮಾವಿನಕುಳಿಯವರು 'ರೂಪಾಂತರ' ನಾಟಕದಲ್ಲಿ ಬುದ್ಧನನ್ನು; ಸಂಸಾರವನ್ನು ತೊರೆದು ಆಧ್ಯಾತ್ಮಿಕ ಲೋಕದೊಳಗೆ ಪ್ರವೇಶ ಪಡೆದುಕೊಂಡರೂ ತನ್ನ ಹೆಂಡತಿಗೆ ನ್ಯಾಯ ಒದಗಿಸಲಾರದ ಸ್ಥಿತಿಯಲ್ಲಿ ಸೋತನು ಎನ್ನುವುದನ್ನು ಧ್ವನಿಸುತ್ತದೆ. ಇಲ್ಲಿನ ಬುದ್ಧ ಆಧ್ಯಾತ್ಮಿಕವಾಗಿ ಎಷ್ಟೇ ಸಾಧನೆಯನ್ನು ಮಾಡಿದರೂ, ಜಗತ್ತಿಗೆ ಬೆಳಕನ್ನು ತೋರಿದರೂ, ದುಃಖದ ಮೂಲವನ್ನು ಪ್ರಪಂಚಕ್ಕೆ ತೋರಿಸಿದರೂ ಸಹ ದೀಪದ ತಳ ಸದಾ ಕತ್ತಲೆ ಎನ್ನುವಂತೆ ತನ್ನ ಸಂಸಾರದಲ್ಲಿಯೇ ದುಃಖವನ್ನು ಮಡುಗಟ್ಟುವಂತೆ ಮಾಡಿದ್ದನು. ಬುದ್ಧ ಪುರುಷಾರ್ಥ ಸಾಧನೆಯಲ್ಲಿ ಗೆದ್ದರೂ ಒಂದು ಹೆಣ್ಣಿನ ಪುರುಷನಾಗಿ ಸೋತನು. ತನ್ನ ಕೈಹಿಡಿದು ನೂರು ಕನಸುಗಳನ್ನು ಹೊತ್ತು ಬಂದ ಹೆಣ್ಣಿನ ಆಶೋತ್ತರಗಳನ್ನು ಅರ್ಥೈಸಿಕೊಂಡು, ಅದನ್ನು ಈಡೇರಿಸಲಾಗದ, ತನ್ನ ರಕ್ತವನ್ನು ಹಂಚಿಕೊಂಡು ಹುಟ್ಟಿದ ಮಗನಿಗೆ ತಂದೆಯಾಗಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಮಾಡಲಾಗದ ವ್ಯಕ್ತಿಯಾಗಿ ಬುದ್ಧ ಮಾಡಿದ ಸಾಧನೆಯಾದರೂ ಏನು ಎನ್ನುವ ಪ್ರಶ್ನೆಯನ್ನು ಇಲ್ಲಿ ನಾಟಕಕಾರರು ಸ್ತ್ರೀವಾದಿ ಹಿನ್ನೆಲೆಯಲ್ಲಿ ಚಿತ್ರಿಸುತ್ತಾ ಸಾಗುತ್ತಾರೆ.

ದೇವದತ್ತನ ಅಂಬಿನಿಂದ ಸಾಯಬೇಕಿದ್ದ ಹಂಸವನ್ನು ರಕ್ಷಿಸಿದ ಬುದ್ಧನ ಚಿತ್ರಣದೊಂದಿಗೆ ಆರಂಭವಾಗುವ ಬುದ್ಧನ ಚಿತ್ರಣ ಅವನ ವೈರಾಗ್ಯದ ಹಿನ್ನೆಲೆಯಿಂದ ತೆರೆದುಕೊಳ್ಳುತ್ತಾ ಸಾಗುತ್ತದೆ. ಶುದ್ಧೋದನ ಎಷ್ಟೇ

ಪ್ರಯತ್ನಪಟ್ಟರೂ ಬುದ್ಧನು ವೈರಾಗ್ಯಕ್ಕೆ ಒಳಗಾಗಿಯೇ ತೀರುತ್ತಾನೆ. ಸಿದ್ಧಾರ್ಥ ರೋಗಿ, ವೃದ್ಧ, ಸಾವಿನಯಾತ್ರೆಯ ಸಂದರ್ಭಗಳಿಂದ ಜಗತ್ತು ನಶ್ವರ ಎನ್ನುವುದನ್ನು ಅರಿತುಕೊಳ್ಳುತ್ತಾನೆ. ಕೊನೆಗೆ ಅರಮನೆಯನ್ನು ತೊರೆದು ಬೋಧಿವೃಕ್ಷದ ಬಳಿ ಜ್ಞಾನೋದಯವನ್ನು ಹೊಂದುತ್ತಾನೆ.

**"**ಬುದ್ಧ : ಈ ಸಂಸಾರವೆಂಬುದು ಒಂದು ಬಂಧನ. ಬ್ರಹ್ಮಚರ್ಯದ ಪರಿಪಾಲನೆಯಿಂದ ಸರ್ವಸಮತೆಯನ್ನು ಪಡೆಯಬೇಕು. ಮಾನವರೆಲ್ಲರೂ ನನಗೆ ಸಹೋದರರು. ನಿಮ್ಮ ಎಲ್ಲರ ಹೃದಯದಲ್ಲೂ ಬೆಳಕಿದೆ. ಅದನ್ನು ದೈದೇಪ್ಯಮಾನವಾಗಿ ಬೆಳೆಸಬೇಕು. ಚಿಂತೆಯೇ ಕಷ್ಟ. ಚಿಂತೆಯನ್ನು ಬಿಡಬೇಕು. ಆಸೆಯೇ ದುಃಖಕ್ಕೆ ಕಾರಣ**"** [4] ಎನ್ನುವುದನ್ನು ಬುದ್ಧ ಸಾರುತ್ತಾನೆ. ತನ್ನ ಮಗನನ್ನು ರಕ್ಷಿಸುವಂತೆ ಬೇಡುವ ಕಿಸಾಗೋತಮಿಗೆ ಸಾವಿನ ರಹಸ್ಯವನ್ನು ತಿಳಿಸುತ್ತಾನೆ. ಕಾಡಿನಲ್ಲಿ ನರಬೇಟೆಯಾಡುತ್ತಿದ್ದ ಅಂಗುಲಿಮಾಲನನ್ನು ತನ್ನ ಆಧ್ಯಾತ್ಮಿಕ ಉಪದೇಶದಿಂದ ಬದಲಿಸುತ್ತಾನೆ. ಆಮ್ರಪಾಲಿಗೆ ದೇಹವನ್ನು ಗೆಲ್ಲುವ ಸೂತ್ರವನ್ನ ಸಾರುತ್ತಾನೆ. ಜಗತ್ತಿಗೆ ತನ್ನ ಬೌದ್ಧಧರ್ಮದ ಸಾರವನ್ನು ತಿಳಿಯುವಂತೆ ಮಾಡುತ್ತಾನೆ. ಬೌದ್ಧಧರ್ಮದ ಬೆಳವಣಿಗೆಗೆ ಭದ್ರಬುನಾದಿಯನ್ನು ಹಾಕುತ್ತಾನೆ. ಇಷ್ಟೆಲ್ಲಾ ಮಾಡುವ ಬುದ್ಧ ತನ್ನ ಸಂಸಾರಕ್ಕೆ ಒದಗಿಸಿದ ನ್ಯಾಯಯೇನು? ಎನ್ನುವುದರ ಪ್ರಶ್ನೆ ಬಂದಾಗ ಬುದ್ಧ ಇಲ್ಲಿ ಮೌನಿಯಾಗುತ್ತಾನೆ. ಯಶೋಧರೆಯ ದುಗುಡಗಳಿಗೆ ಅವನು ನೀಡುವ ಉತ್ತರ **'**ಕಾಲ ಕಳೆದಂತೆ ಎಲ್ಲವೂ ಸರಿಯಾಗುತ್ತದೆ**'** ಎನ್ನುವುದಾಗಿದೆ. ಧರ್ಮಪ್ರವರ್ತಕನಾದ ಬುದ್ಧ ಸಾಂಸಾರಿಕ ಧರ್ಮವನ್ನು ಪಾಲಿಸದೇ ಸೋತನೆಂದು ಸ್ವತಃ ಹೆಂಡತಿಯೇ ದೂರಿದಾಗ ಅದಕ್ಕೆ ನ್ಯಾಯ ಒದಗಿಸಲಾರದೆ ಕಾಲದ ಮೇಲೆ ಎಲ್ಲವನ್ನೂ ಹೊರಿಸುವ ಮಹಾನುಭಾವನಾದ ಬುದ್ಧನನ್ನು ಈ ನಾಟಕ ಸೂಕ್ಷ್ಮವಾಗಿ ವಿಡಂಬಿಸುತ್ತದೆ.

ಮಾವಿನಕುಳಿಯವರ **'**ರೂಪಾಂತರ**'** ನಾಟಕವು ಸಂಪೂರ್ಣವಾಗಿ ಯಶೋಧರೆಯ ಸುತ್ತಲೂ ಸುತ್ತುವ ಕಥನವಾಗಿ ಕಂಡುಬರುತ್ತದೆ. ಇಲ್ಲಿ ಬುದ್ಧನ ನಾಟಕದ ಪ್ರಧಾನ ಪಾತ್ರವೇ ಆಗಿದ್ದರೂ ಬುದ್ಧನ ತಪ್ಪುಗಳನ್ನು, ಅವನು ಎಡವಿದ ದಾರಿಗಳನ್ನು ತೋರಿಸುತ್ತಾ, ಅದರಿಂದ ಸಿದ್ಧಾರ್ಥನನ್ನು ನಂಬಿ ಕೈಹಿಡಿದು ಬಂದಿದ್ದ ಹೆಣ್ಣೊಬ್ಬಳು ಅನುಭವಿಸಿದ ನೋವಿನ ಬದುಕಿನ ಎಳೆಗಳನ್ನು ಈ ನಾಟಕ ನಿರೂಪಿಸುತ್ತದೆ.

**"**ನಾಟಕದ ಅದ್ಭುತ ಯಶಸ್ಸು ಇರುವುದು ಯಶೋಧರೆಯ ಪಾತ್ರ ರಚನೆಯಲ್ಲಿ. ಪತಿ ಸುಖದಿಂದ ವಂಚಿತಳಾದ ತುಂಬು ಯೌವನದ ಹೆಣ್ಣಾಗಿ, ತಂದೆಗಾಗಿ ಕಾತರಿಸುವ ಹುಡುಗನ ತಾಯಿಯಾಗಿ, ತನ್ನ ಅನನ್ಯತೆಗಾಗಿ ಪುರುಷ ನಿರ್ಮಿತ ಸಮಾಜವನ್ನು ಪ್ರಶ್ನಿಸುವ ಸ್ತ್ರೀಯಾಗಿ ಯಶೋಧರಾ ಮಿಂಚುತ್ತಾಳೆ**"** [5] ಎಂದು ಸಿ.ಎನ್. ರಾಮಚಂದ್ರರಾವ್ ಅವರು ಅಭಿಪ್ರಾಯ ಪಡುತ್ತಾರೆ. ತುಂಬು ಯೌವನದ ಯಶೋಧರೆಯ ನೋವನ್ನು ಲೇಖಕರು ಉತ್ಕಟತೆಯಿಂದ ಚಿತ್ರಿಸುತ್ತಾರೆ. ಅಂಬಿಕೆ ಕೊಯ್ದು ಮೊಗ್ಗುಗಳೊಡನೆ ತನ್ನನ್ನು ಭಾವನಾತ್ಮಕವಾಗಿ ಸಮೀಕರಿಸಿಕೊಂಡು ಯಶೋಧರಾ ಅಂಬಿಕೆಯನ್ನು ಕೇಳುತ್ತಾಳೆ **"**ಹೂವುಗಳು ಮಕರಂದ ತುಂಬಿ ನಿಂತು ಪತಂಗಗಳು ಬಂದು ಅವುಗಳನ್ನು ಚಪ್ಪರಿಸಿ ಹೀರಲಿ ಎಂದು ತುದಿಗಾಲಲ್ಲಿ ನಿಂತಿರುವಾಗ.. ನಿಂತಿರುವಾಗ.. ನೀನು ಅವುಗಳನ್ನೆಲ್ಲಾ ನಿಷ್ಕರುಣೆಯಿಂದ ಕಿತ್ತು ತಂದಿದ್ದೀಯಾ.. ನಾಳೆ ಇದು ಬಾಡಿ ನಶಿಸಿ

[4] ರೂಪಾಂತರ, ಜಯಪ್ರಕಾಶ ಮಾವಿನಕುಳಿ, ಪು.28
[5] ರೂಪಾಂತರ, ಜಯಪ್ರಕಾಶ ಮಾವಿನಕುಳಿ, ಪು.36

ಹೋಗುತ್ತೆ.. ಹೇಳು. ಇವುಗಳಲ್ಲಿರುವ ಮಕರಂದದ ಗತಿಯೇನು? ಮಕರಂದದೊಂದಿಗೆ ಇದು ಹೀಗೆಯೇ ಬಾಡಿ ಹೋಗಬೇಕೆ?.." [6] ಇದೇ ರೀತಿಯ ನೋವನ್ನ ಬುದ್ಧನೊಡನೆ ಮಾತನಾಡುವಾಗಲೂ ಹೃದಯಸ್ಪರ್ಶಿಯಾಗಿ ಯಶೋಧರೆ ತನ್ನ ನೋವನ್ನು ಪ್ರಕಟಿಸುತ್ತಾಳೆ. ಆದರೆ "ಇನ್ನೂ ಸುಖ ಬೇಕು ಎಂದು ನಾನು ಹಾತೊರೆಯುತ್ತಿರುವಾಗ.. ಹಾತೊರೆಯುತ್ತಿರುವಾಗ.. ನನ್ನ ಮೈಮೇಲಿನ ಲಾವಾರಸ ನೊರೆ ನೊರೆಯಾಗಿ ಉಕ್ಕುತ್ತಿರುವಾಗ.. ನೀವು ಹೊರಟು ಹೋದಿರಿ.. ನಿಮಗೆ ಪರವೇ ಮುಖ್ಯ ಆಗಿದ್ದರೆ ನನ್ನನ್ನೂ ಮದುವೆ ಯಾಕೆ ಆದಿರಿ?" [7] ಎನ್ನುವ ಪ್ರಶ್ನೆ ಯಶೋಧರೆಯೊಳಗೆ ಬಂಡಾಯದ ದನಿಯಾಗಿ ಹೊರಹೊಮ್ಮುತ್ತದೆ. ಅಗ್ನಿಸಾಕ್ಷಿಯಾಗಿ ಇಹಪರಗಳಲ್ಲಿ, ಕಷ್ಟಸುಖಗಳಲ್ಲಿ ಸಮಭಾಗಿಗಳಾಗಿರುತ್ತೇವೆಂದು ಪ್ರತಿಜ್ಞೆ ಮಾಡಿ ಪತಿಪತ್ನಿಯರು ಒಂದು ಸಾಂಸಾರಿಕ ವ್ಯವಸ್ಥೆಗೆ ಒಳಪಟ್ಟ ಮೇಲೆ, ಪತ್ನಿಯ ಒಪ್ಪಿಗೆಯಿಲ್ಲದೆ ಈ ವ್ಯವಸ್ಥೆಯನ್ನು ನಿರಾಕರಿಸಲು ಪುರುಷನಿಗೆ ಏನು ಅಧಿಕಾರವಿದೆ? ಎನ್ನುವುದೇ ಈ ನಾಟಕ ತೆರೆದಿಡುವ ನೈತಿಕ ಪ್ರಶ್ನೆಯಾಗಿದೆ.

"ನಿಮಗೆ ಪರಲೋಕದ ಬಗ್ಗೆ ದಾರಿ ತೋರಿಸಲು.. ನಿಮ್ಮ ಜೀವನದ ಬಗ್ಗೆ ವೈರಾಗ್ಯ ತರಿಸಲು ಒಂದು ಹೆಣ್ಣು ಬೇಕು.. ಹೆಣ್ಣು ಎಂದರೆ ನಿಮಗೊಂದು ಗಿಡಮೂಲಿಕೆ ಎಂದು ತಿಳಿದಿದ್ದೀರಿ ಅಲ್ಲವೇ.. ಆ ಮೂಲಿಕೆಯ ಬಗ್ಗೆ ಎಂದಾದರೂ ಯೋಚಿಸಿದ್ದೀರಾ? ಮುಗಿದ ನಂತರ ಓಡುವ ಆತುರ ನಿಮಗೆ. ಅನುಭವದ ನಂತರ ಅನುಭಾವಿಯಾಗುವ ಕಾತರ ನಿಮಗೆ. ನಿಮ್ಮ ತಂದೆ ಮಹಾಪ್ರಭುಗಳಿಗೆ ರಾಜಕುಮಾರನನ್ನು ಸಾಕಲು ಒಬ್ಬ ಆಪ್ತ ಸಖಿಯಾಗಿ ನಾನು ಬೇಕು.. ದಾಸಿಯರಿಂದ ಏನಾದರೂ ಅನಾಹುತವಾಗಿ ರಾಹುಲನಿಗೆ ತೊಂದರೆಯಾದರೆ. ಸಿಂಹಾಸನ ಅನಾಥವಾಗುತ್ತದೆ. ಅವರಿಗೆ ಸಿಂಹಾಸನದ ಚಿಂತೆ. ನಿಮಗೆ ಮೋಕ್ಷದ ಚಿಂತೆ. ನನಗೆ..? ನಾನು ಯಾವ ಗಂಡಸರೊಡನೆಯೂ ಮಾತನಾಡುವಂತಿಲ್ಲ. ಅವರಿಗೆ ತನ್ನ ತಂದೆಯಷ್ಟು ವಯಸ್ಸಾಗಿದ್ದರೂ ಜನ ಕುಹಕ ಆಡುತ್ತಾರೆ. ಇನ್ನು ಪುರದ ಹೊರಗೆ ನೋಡಿದ್ದೀರೇನು? ಪ್ರತೀದಿನ ಸೋಮಾರಿಗಳ ಸಂಖ್ಯೆ ಎಷ್ಟು ಪಟ್ಟು ಹೆಚ್ಚಿದೆ ಎಂದು? ಉಳುವವರಿಲ್ಲದೇ ಭೂಮಿ ಬಾಯಿ ಕಳೆದು ಕುಳಿತಿದೆ.. ನಿಮ್ಮ ಧರ್ಮ ಜನರನ್ನು ವಿಮುಖರನ್ನಾಗಿ ಮಾಡುತ್ತಿರುವುದು ತಿಳಿದಿದೆಯೇನು?"[8] ಎನ್ನುವ ಪ್ರಶ್ನೆಗಳು ಕೇವಲ ಯಶೋಧರೆಯ ವೈಯಕ್ತಿಕತೆಯ ಆಶಯಗಳಾಗಿ ಮೂಡುವುದಿಲ್ಲ. ಬದಲಿಗೆ ಗಂಡನಿಂದ ಪರಿತ್ಯಕ್ತರಾದ ಹೆಣ್ಣಿನ ಸುತ್ತಲೂ ಸಮಾಜ ರೂಪಿಸುವ ಸಂಕೋಲೆಯ ಸ್ವರೂಪವೂ ಆಗಿ ಮೂಡಿಬರುತ್ತದೆ. ಒಂಟಿಯಾಗಿರುವ ಹೆಣ್ಣನ್ನು ಸಮಾಜ ತಪ್ಪಾಗಿ ಗ್ರಹಿಸುತ್ತದೆ, ಅನೇಕ ಕಟ್ಟಳೆಗಳನ್ನು ವಿಧಿಸುತ್ತದೆ. ತನ್ನದಲ್ಲದ ತಪ್ಪಿಗೆ ಯಶೋಧರೆ ಈ ಎಲ್ಲಾ ನೋವುಗಳನ್ನು ಅನುಭವಿಸಬೇಕಾಗುತ್ತದೆ. ಆದರೂ ಇಲ್ಲಿ ಯಶೋಧರೆಗೆ ಯಾವುದೇ ಅಸ್ತಿತ್ವವಿಲ್ಲ. ಸಿಂಹಾಸನದ ಉತ್ತರಾಧಿಕಾರಿಯ ತಾಯಿಯಾಗಿ, ಆ ಉತ್ತರಾಧಿಕಾರಿಯನ್ನು ಉಳಿಸಿ–ಬೆಳೆಸುವ ದಾಸಿಯಾಗಿ ಮಾತ್ರ ಯಶೋಧರೆಯ ಅಸ್ತಿತ್ವ ಉಳಿದುಕೊಂಡಿದೆ. ಹಾಗಾದರೆ ಅವಳ ಭಾವನೆಗಳಿಗೆ

---

[6] ಅದೇ., ಪು.23

[7] ಅದೇ., ಪು.37

[8] ರೂಪಾಂತರ, ಜಯಪ್ರಕಾಶ ಮಾವಿನಕುಳಿ, ಪು.37

ಬೆಲೆಗಳಲ್ಲಿಲ್ಲವೇ? ಎನ್ನುವುದು ಅಂದಿನ ಸ್ತ್ರೀಸಮಾಜ ಅನುಭವಿಸುತ್ತಿದ್ದ ಸಂಕಟಗಳ ಎಳೆಗಳನ್ನು ಸಹ ಈ ನಾಟಕ ತೆರೆದಿಡುತ್ತದೆ.

ಒಟ್ಟಾರೆ ರೂಪಾಂತರ ನಾಟಕವು **"**ನವೋದಯ ಯುಗದಲ್ಲಿ ಪ್ರಾರಂಭವಾದ ಪುರಾಣಗಳನ್ನು ಪ್ರಶ್ನಿಸುವ, ಸಿದ್ಧ ಪ್ರತಿಮೆಗಳನ್ನು ಭಂಜಿಸುವ ವೈಚಾರಿಕ ಪ್ರಕ್ರಿಯೆ ದಾರಿಯಲ್ಲಿ ಒಂದು ಸಫಲ ಹಾಗೂ ಅರ್ಥಪೂರ್ಣ ಹೆಜ್ಜೆ**"**[9] ಎನ್ನುವ ಡಾ.ಸಿ.ಎನ್. ರಾಮಚಂದ್ರನ್ ಅವರ ಮಾತುಗಳು ಇಲ್ಲಿ ಉಲ್ಲೇಖನೀಯ. ಇಡೀ ನಾಟಕದ ವಸ್ತು ಮತ್ತು ಸ್ವರೂಪ ಬುದ್ಧನ ಬದುಕಿನ ಪ್ರಮುಖ ಘಟನೆಗಳನ್ನು ಆಧರಿಸಿದ್ದೇ ಆದರೂ ನಾಟಕದ ಚೌಕಟ್ಟು ಯಶೋಧರೆಯ ಮನೋಸಂಘರ್ಷವನ್ನು ಹೊರಹಾಕುವ ಸ್ತ್ರೀಸಂಕಥನವಾಗಿ ಹೊರಹೊಮ್ಮುತ್ತದೆ.

**ಆಕರ ಗ್ರಂಥ**


- ಜಯಪ್ರಕಾಶ ಮಾವಿನಕುಳಿ. (1997). ರೂಪಾಂತರ. ಸ್ಫಟಿಕ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಕೀರ್ತಿನಾಥ ಕುರ್ತುಕೋಟಿ. (2021). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮನೋಹರ ಗ್ರಂಥಮಾಲಾ.
- ಮುಗುಳಿ, ರಂ. ಶ್ರೀ. (2018). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ರಾಜರತ್ನಂ, ಜಿ.ಪಿ, (ಅನು.) (ಸಂ.) (1941). *ವೈಶಾಖ ಶುಕ್ಲ ಪೂರ್ಣಿಮೆ ಅಥವಾ ಬುದ್ಧನಿಗೆ ಕನ್ನಡದ ಕಾಣಿಕೆ.* ಶಾಕ್ಯ ಸಾಹಿತ್ಯ ಮಂಟಪ.
- ಶೇಷಗಿರಿ ರಾವ್, ಎಲ್.ಎಸ್. (2020). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.
- ಶಿವರುದ್ರಪ್ಪ, ಜಿ.ಎಸ್. (2021). *ಕನ್ನಡ ಸಾಹಿತ್ಯ ಸಮೀಕ್ಷೆ.* ಸಪ್ನ ಬುಕ್ ಹೌಸ್.


[9] ರೂಪಾಂತರ, ಜಯಪ್ರಕಾಶ ಮಾವಿನಕುಳಿ, ಪು.20